(ರೂ. ಲಕ್ಷಗಳಲ್ಲಿ)

1. ರಸ್ತೆಗಳಿಗೆ	67.80
2. ಒಳಚರಂಡಿ	147.11
3. ರಸ್ತೆ ಬದಿಯ ಚರಂಡಿಗಳಿಗಾಗಿ	127.47
4. ಕುಡಿಯುವ ನೀರಿನ ಸೌಲಭ್ಯಕ್ಕಾಗಿ	139.06
5. ಇತರೆ ಕೆಲಸಗಳು- ಬೀದಿ ದೀಪ, ಚಪ್ಪಡಿ, ಪೇವಿಂಗ್ ವಗೈರೆ	34.97
ಒಟ್ಟು	516.41

ಇ) ಉದ್ಭವಿಸುವುದಿಲ್ಲ.

ಮೈಸೂರು ನಗರಕ್ಕೆ ಕಪಿಲಾ ನದಿಯಿಂದ ನೀರು ಸರಬರಾಜು.

328(88)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೈಸೂರು ನಗರ ಎಲ್ಲಾ ದಿಕ್ಕುಗಳಿಂದಲೂ ಬೆಳೆಯುತ್ತಿದ್ದು ಕಪಿಲಾ ನದಿಯಿಂದ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರ ಉದ್ದೇಶಿಸಿದೆಯೇ?

2. ಈ ಕುರಿತು ಒಂದು ಯೋಜನೆಯನ್ನು ತಯಾರಿಸಲಾಗಿದೆಯೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

1. ಮೈಸೂರು ನಗರಕ್ಕೆ ಕಪಿಲಾ ನದಿಯಿಂದ ನೀರು ಸರಬರಾಜು ಮಾಡುವ ಪ್ರಸ್ತಾವನೆಯ ಬಗ್ಗೆ ಪರಿಶೀಲನೆ ಹಂತದಲ್ಲಿದೆ.

2. ಇಲ್ಲಾ.

ಮೈಸೂರಿನ ಕುಂಬಾರಕೊಪ್ಪಲು ಬಡಾವಣೆಗೆ ಕಾವೇರಿ ನೀರು ಸರಬರಾಜು.

329(90)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ(ಚಾಮರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕುಂಬಾರ ಕೊಪ್ಪಲು ಬಡಾವಣೆಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆಯೇ?

2) ಇಲ್ಲದಿದ್ದಲ್ಲಿ ಸದರೀ ಬಡಾವಣೆಗೆ ಕಾವೇರಿ ನೀರು ಸರಬರಾಜು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

3) ಈ ಬಡಾವಣೆಗೆ ಎಂದು ಕಾವೇರಿ ನೀರು ಸರಬರಾಜು ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

1) ಹೌದು.

2 ಮತ್ತು 3) ಉದ್ಭವಿಸುವುದಿಲ್ಲ.

ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಆಯೋಗ.

330(243)

ಶ್ರೀ ಸುರೇಶ್‌ಕುಮಾರ್ ಎಸ್.(ರಾಜಾಜಿನಗರ):ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟರ ಕಲ್ಯಾಣಕ್ಕಾಗಿ ಪ್ರತ್ಯೇಕ ಆಯೋಗ ರಚಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಆಯೋಗದ ರೂಪು - ರೇಷೆಗಳಾವುವು; ಸದರಿ ಆಯೋಗ ಯಾವಾಗಿನಿಂದ ಅಸ್ತಿತ್ವಕ್ಕೆ ಬರುತ್ತದೆ?

ಇ) ಆಯೋಗದ ಕಾರ್ಯವ್ಯಾಪ್ತಿ ಏನು; ಇದಕ್ಕೂ ಎಸ್.ಸಿ : ಎಸ್.ಟಿ ಹಣಕಾಸು ಆಯೋಗಕ್ಕೂ ಇರುವ ವ್ಯತ್ಯಾಸವೇನು?

ಈ) ಆಯೋಗದ ಉಸ್ತುವಾರಿಯನ್ನು ಯಾರಿಗೆ ವಹಿಸಲಾಗುವುದು;